ರೀತಿಯಲ್ಲಿ ಮಾಡುತ್ತೇವೆ. ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ಈ ಕೂಡಲೇ ದುರಸ್ತಿ ಕಾರ್ಯವನ್ನು ಕೈಗೊಳ್ಳಬೇಕೆಂದು ಹೇಳುವುದರ ಜೊತೆಗೆ ಮಾನ್ಯ ಜಲಸಂಪನ್ಮೂಲ ಸಚಿವರಿಗೂ ಕೂಡ ಸದಸ್ಯರ ಅತಂಕದ ವಿಚಾರಗಳನ್ನು ತಿಳಿಸಿ, ಆ ಇಲಾಖೆಯಿಂದ ತುರ್ತಾಗಿ ಆಗಬೇಕಾಗಿರುವ ಕಾಮಗಾರಿಯನ್ನು ಕೈಗೊಳ್ಳುವಂತೆ ಪ್ರಯತ್ನ ಮಾಡುತ್ತೇವೆ.

ಅ) **ವಿಷಯ** : ರಾಯಚೂರು ಜಿಲ್ಲೆಯ ಹಲವಾರು ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಶಿಕ್ಷಕರುಗಳಿಗೆ ವೇತನ ಬಿಡುಗಡೆ ಮಾಡದಿರುವ ಬಗ್ಗೆ.

ಶ್ರೀ ಎ.ಪಾಪರೆಡ್ಡಿ (ರಾಯಚೂರು) : ಮಾನ್ಯ ಚೇತ್ಮನ್‌ರವರೇ, ನಾನು ನಮ್ಮಲ್ಲಿರುವ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ಮೂರು ತಿಂಗಳುಗಳಿಂದ ಸಂಬಳ ಪಾವತಿ ಆಗಿಲ್ಲವೆಂದು ಹೇಳುತ್ತಾ ಮಾನ್ಯ ಮಂತ್ರಿಯವರು ಮೇ ತಿಂಗಳಲ್ಲಿ ರಾಯಚೂರು ನಗರಕ್ಕೆ ಬಂದಿದ್ದರು. ಈ ಬಗ್ಗೆ ನಾನು ಸನ್ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಚೇರ್ಮನ್ : ಮಾನ್ಯ ಪಾಪರೆಡ್ಡಿಯವರೇ, ತಾವು ಈ ವಿಷಯದ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯಿರಿ. ಅದಕ್ಕೆ ಅವರು ಉತ್ತರ ಹೇಳಿದ ನಂತರ ತಾವು ಉಪ ಪ್ರಶ್ನೆಯನ್ನು ಕೇಳಬಹುದು. ಮಾನ್ಯ ಸದಸ್ಯರು ಸಚಿವರ ಗಮನಕ್ಕೆ ಸೆಳೆದಿದ್ದಾರೆ. ಮಾನ್ಯ ಸಚಿವರು ಈಗ ಉತ್ತರವನ್ನು ಕೊಡುತ್ತಾರೆ.

ಶ್ರೀ ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಚೇರ್ಮನ್‌ರವರೇ , 2005–06ನೇ ಸಾಲಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ (ಮಂಜೂರಾದ ಹುದ್ದೆಗಳಲ್ಲಿ ಖಾಲಿ ಹುದ್ದೆಗಳಷ್ಟು ಹೊರತು ಪಡಿಸಿ) ಬೇಕಾಗುವ ವಾರ್ಷಿಕ ಅನುದಾನಕ್ಕಿಂತ ಕಡಿಮೆ ಅನುದಾನ ಲಿಂಕ್ ಡಾಕ್ಯುಮೆಂಟ್ ಪ್ರಕಾರ ಮಂಜೂರಾಗಿರುತ್ತದೆ.

ಲಿಂಕ್ ಡಾಕ್ಯುಮೆಂಟ್ ಪ್ರಕಾರ ಅನುದಾನ ಕೊರತೆ ಮಂಜೂರಾತಿ ಮತ್ತು 2004–05ರ ಎಲ್ಲಾ ತರಹದ ಬಾಕಿ (ವೇತನ ಬಾಕಿ, ಕನ್ನಡ ವೇತನ ಬಡ್ತಿ ಬಾಕಿ ಹಾಗೂ ಇತ್ಯಾದಿ ಬಾಕಿ ಬಿಲ್ಲುಗಳು) ಸೇರಿಕೊಂಡಿರುವುದರಿಂದ ರಾಯಚೂರು ತಾಲ್ಲೂಕಿನ ಪ್ರಾಥಮಿಕ/ಪ್ರೌಢ ಶಿಕ್ಷಕರ ವೇತನ (ಮಾಹೆ ಜೂನ್ 2005ರ ವೇತನ ಅನುದಾನ ಬಿಡುಗಡೆಯಾಗುವ 2ನೇ ತ್ರೈಮಾಸಿಕ ಅನುದಾನ ಕಂತಿನಲ್ಲಿ ಖರ್ಚು ಭರಿಸಬೇಕಾಗಿರುವ ಹಿನ್ನೆಲೆಯಲ್ಲಿ) ಮಾಹೆ ಮೇ 2005ಕ್ಕೆ ಯೋಜನೇತರ ಪ್ರಾಥಮಿಕ ಶಿಕ್ಷಣ '22–02–01' ರ ಲೆಕ್ಕಶೀರ್ಷಿಕೆಯಲ್ಲಿ ರೂ 98.00 ಲಕ್ಷ ಮತ್ತು ಯೋಜನೇತರ ಪ್ರೌಢ ಶಿಕ್ಷಣ '22–02–02'ರ ಲೆಕ್ಕಶೀರ್ಷಿಕೆಯಲ್ಲಿ ರೂ 24.00 ಲಕ್ಷ ಅನುದಾನ ಹೀಗೆ ಒಟ್ಟು ರೂ. 1212.00 ಲಕ್ಷ ಅನುದಾನ ಕೊರತೆ ಇದೆ.

ಜಿಲ್ಲೆಯ ಎಲ್ಲಾ ತಾಲ್ಲೂಕಿಗಳಲ್ಲಿ (ರಾಯಚೂರು ತಾಲ್ಲೂಕು ಹೊರತುಪಡಿಸಿ) 2005–06ನೇ ಸಾಲಿನ 1ನೇ ತ್ರೈಮಾಸಿಕ ಅನುದಾನ ಕಂತಿನಲ್ಲಿ ಮಾಹೆ ಮಾರ್ಚ್, ಏಪ್ರಿಲ್ ಮತ್ತು ಮೇ 2005ರ ಪ್ರಾಥಮಿಕ/ಪ್ರೌಢ ಶಿಕ್ಷಕರ ವೇತನ ಪಾವತಿಸಲಾಗಿದೆ.

ರಾಯಚೂರು ತಾಲ್ಲೂಕಿಗೆ 2005–06ನೇ ಸಾಲಿನಲ್ಲಿ ಬಿಡುಗಡೆಯಾದ 1ನೇ ತ್ರೈಮಾಸಿಕ ಅನುದಾನ ಕಂತಿನಲ್ಲಿ ಯೋಜನೇತರ ಪ್ರಾಥಮಿಕ ಶಿಕ್ಷಣ '22–02–01' ರ ಲೆಕ್ಕಶೀರ್ಷಿಕೆಯಲ್ಲಿ ರೂ. 222.93 ಲಕ್ಷ ಮತ್ತು ಯೋಜನೇತರ ಪ್ರೌಢ ಶಿಕ್ಷಣ '22–02–02'ರ ಲೆಕ್ಕಶೀರ್ಷಿಕೆಯಲ್ಲಿ ರೂ. 44.99 ಲಕ್ಷ ಅನುದಾನ ಹೀಗೆ ಒಟ್ಟು ರೂ. 267.92 ಲಕ್ಷ ಅನುದಾನ ಮಂಜೂರಾತಿಯಾಗಿದ್ದು ಇದರಲ್ಲಿ ಮಾಹೆ ಮಾರ್ಚ್ 2005 ಮತ್ತು ಏಪ್ರಿಲ್ 2005ರ ವೇತನ ಹಾಗೂ 2004–05ರ ಎಲ್ಲಾ ತರಹದ ಬಾಕಿ ಬಿಲ್ಲುಗಳು (ವೇತನ ಬಾಕಿ ಕನ್ನಡ ವಾರ್ಷಿಕ ಬಡ್ತಿ ಬಾಕಿ ಹಾಗೂ ಇತ್ಯಾದಿ ಬಾಕಿ ಬಿಲ್ಲುಗಳು) ಸೇರಿಕೊಂಡು ಪ್ರಾಥಮಿಕ/ಪ್ರೌಏ ಶಿಕ್ಷಕರ ವೇತನ ಪಾವತಿಸಲಾಗಿದೆ. ಮಾಹೆ ಏಪ್ರಿಲ್ 2005ರ ರಾಯಚೂರು ತಾಲ್ಲೂಕಿನ ಪ್ರಾಥಮಿಕ/ಪ್ರೌಢ ಶಿಕ್ಷಕರ ವೇತನ ಪಾವತಿಸಲು ಇನ್ನೂ ರೂ. 15.00 ಲಕ್ಷ ಅನುದಾನದ ಕೊರತೆಯಿದೆ. ಶೀಘ್ರವೇ ಅನುದಾನ ಬಿಡುಗಡೆಯಾಗಲಿದ್ದು. ಎಲ್ಲಾ ಶೀಕ್ಷರಿಗೂ ಮಾಸಿಕ ವೇತನವನ್ನು ಬಿಡುಗಡೆ ಮಾಡಲಾಗುವುದು.

ಮಾನ್ಯ ಚೇರ್ಮನ್‌ರವರೇ, ಇದು ನಿಧಾನವಾಗಿದೆ ನಿಜ. ಈಗ ನಮ್ಮ ಇಲಾಖೆಯ ಕಾರ್ಯದರ್ಶಿಯವರೇ, ಅವರ ಜಡ್.ಪಿ.ಯ ಆಡಳಿತಾಧಿಕಾರಿಯಾಗಿ ನೇಮಕವಾಗಿದ್ದಾರೆ. ನಾನು ಬೆಳ್ಳಿಗ್ಗೆ ಕೂಡ ಮಾತನಾಡಿದ್ದೇನೆ. ಅದನ್ನು ಆದಷ್ಟು ಬೇಗ ಅವರು ಬಿಡುಗಡೆ ಮಾಡುತ್ತಾರೆ.

ಶ್ರೀ ಎ.ಪಾಪರೆಡ್ಡಿ : ಮಾನ್ಯ ಚೇರ್ಮನ್‌ರವರೇ, ಈಗಾಗಲೇ ಮೂರು ತಿಂಗಳು ಆಯಿತು. ಅಲ್ಲಿರುವಂತಹ ಶಿಕ್ಷಕರಿಗೆ ಬಹಳ ತೊಂದರೆಯಾಗಿದೆ. ನಾನು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುವುದೇನೆಂದರೆ ತಕ್ಷಣ ಶಿಕ್ಷಕರಿಗೆ ಹಣ ಬಿಡುಗಡೆ ಆಗಬೇಕು, ಏಕೆಂದರೆ ಹಳ್ಳಿಗಳಲ್ಲಿ ಪಾಠ ಹೇಳಿಕೊಡುವಂತಹ ಶಿಕ್ಷಕರು ಇವತ್ತು ಅವರಿಗೆ ಸಂಬಳವಿಲ್ಲದೇ, ಅವರು ಹಳ್ಳಿಗಳಲ್ಲಿ ಮಕ್ಕಳಿಗೆ ಹೇಗೆ ಪಾಠವನ್ನು ಕಲಿಸಬೇಕು? ಅವರು ಕಷ್ಟದಲ್ಲಿರುವಾಗ ಮಕ್ಕಳಿಗೆ ಬೋಧನೆಯನ್ನು ಮಾಡುವುದು ಕಷ್ಟವಾಗುತ್ತದೆ. ಆದುದರಿಂದ ಸರ್ಕಾರಕ್ಕೆ ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ, ತಕ್ಷಣ ಹಣವನ್ನು ಬಿಡುಗಡೆ ಮಾಡಿ, ಶಿಕ್ಷಕರಿಗೆ ಸಂಬಳವನ್ನು ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಚೇರ್ಮನ್ : ಆಯಿತು. ಮಾನ್ಯ ಸಚಿವರು ಆದಷ್ಟು ಬೇಗ ಹಣವನ್ನು ಬಿಡುಗಡೆ ಮಾಡಿ ಕೊಡುತ್ತೇವೆಂದು ಹೇಳಿದ್ದಾರೆ.

(ಇ) ವಿಷಯ : ಬೆಂಗಳೂರಿನ ಶಾಸಕರ ಗೃಹ ನಿರ್ಮಾಣ ಸಹಕಾರ ಸಂಘವು ಸದಸ್ಯರಿಂದ ನಿವೇಷನಕ್ಕಾಗಿ ಹಣ ಪಡೆದಿದ್ದರೂ, ನಿವೇಶನ ವಿತರಿಸದೇ ಸತಾಯಿಸುತ್ತಿರುವ ಬಗ್ಗೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಚೇರ್ಮನ್‌ರವರೇ, ನಾನು ಶಾಸಕರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ನಡೆದಂತಹ ಅವ್ಯವಹಾರದ ಬಗ್ಗೆ ಮಾನ್ಯ ಸಚಿವರ ಗಮವನ್ನು ಸೆಳೆಯುತ್ತಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) (ಸಹಕಾರ ಸಚಿವರ ಪರವಾಗಿ) : ಮಾನ್ಯ ಚೇರ್ಮನ್‌ರವರೇ, ನಾನು ತಮ್ಮ ಅಪ್ಪಣೆಯ ಮೇರೆಗೆ ಮಾನ್ಯ ಸಹಕಾರ ಸಚಿವರ ಪರವಾಗಿ ಈ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.